# ಪ್ರಸಂಗ ಸಾಹಿತ್ಯ

**ನಾಂದಿ:**
**ಕುಸುಮಷಟ್ಪದಿ**
ಗಣಪತಿಗೆ ಶಾರದೆಗೆ |
ಪರಮೇಷ್ಠಿ ಹರಿಲಕ್ಷ್ಮಿ |
ಹರಗಿರಿಜೆ ಗೀರ್ವಾಣಗಣಕೆ ಬಾಗಿ |
ಸರಸಕವಿಗಳಿಗೆರಗಿ |
ಒರೆವೆ ಹಿರಿಯರು ಹರಸು |
ತಿರೆ ಯಕ್ಷಗಾನ ಪ್ರಸಂಗವಾಗಿ || 1 ||

*ಮಹಾವಿಷ್ಣು :*
**ಸೌರಾಷ್ಟ್ರ - ತ್ರಿವುಡೆ**
ಶ್ರೀಪತಿಯು ಚಿಂತಿಸಿದ ಧೀರ ಮ |
ಹೀಪತಿಗಳಾರಿಳೆಯ ಧರ್ಮವ |
ಕಾಪಿಡುವ ಸತ್ಕುಲದೊಳೊಗೆದ ಪ್ರ | ತಾಪದವರು || 1 ||
ದೈವ ಮಾನುಷದಿಂದ ಮರ್ತ್ಯವ|
ದಿವ್ಯಕೇರಿಪ ದಿವಿಜವಂದ್ಯರ |
ಭವ್ಯತೆಯ ಬೆಳಗಿಸುವೆನೆಂದನು | ಅವ್ಯಯಾತ್ಮ || 2 || 3 ||

*ಧುಂಧು :*
**ಭಾಮಿನಿ**
ದುರುಳ ಮಧುಕೈಟಭರು ಪೂರ್ವದಿ |
ಹರಿಯೊಡನೆ ಹಳಚುತ್ತ ಬೆವರಲು |
ಉರಿದು ಪುಟ್ಟಿದನೋರ್ವ ದಾನವ ಧುಂಧುನಾಮಕನು ||
ಗುರುತರದ ತಪದಿಂ ವಿರಿಂಚಿಯ |
ವರವ ಸಾಧಿಸಿಕೊಂಡ ದೇವಾ |
ಸುರಗರುಡಗಂಧರ್ವರಿಂದಲಿ ಮರಣವಿಲ್ಲೆಂದು || 1 || 4 ||

**ಕಾಂಬೋಧಿ - ಝಂಪೆ**
ಹರಿಹರಾದಿಗಳಿಣೆಯೆ | ಸುರರ ಸದೆಬಡಿದಿರುವೆ |
ವರವನಿತ್ತಿಹ ಬ್ರಹ್ಮ | ನರಗುರಿಗಳೇನು ||
ಉರಿದು ಮೂಲೋಕಮಂ | ಸುಡುವ ಮನದೊಳಗಿಳಿದು |
ಧರಣಿಯಾಳದೊಳುಗ್ರ ತಪಗೈದನವನು || 1 || 5 ||

**ಭಾಮಿನಿ**
ಭೂಮಿಯಾಳದಿ ತಪದಿ ಜ್ವಲಿಸಲು |
ಯಾಮಿನೀಚರ ಬತ್ತಿತೈ ಜಲ |
ಕ್ಷಾಮವಾವರಿಸಿತ್ತು ಸಸ್ಯಾವರಣ ಮರೆಯಾಗಿ ||
ಭೂಮಗಾತ್ರದ ದನುಜನುಸಿರಿಂ |
ಧೂಮ ದಳ್ಳುರಿ ಮಸಗೆ ನೆಲ ಮರು |
ಭೂಮಿಯಾಯಿತು ಹೂಂಕರಿಸಿ ಭೂಕಂಪನಂ ಗೈದ || 1 || 6 ||

*ಉತ್ತಂಕ :*
**ಮಧ್ಯಮಾವತಿ - ಆದಿ**
ವ್ರತಿಪತಿಯುತ್ತಂಕ ಉಜ್ಜಾಲಕದಲಿ |
ಸತತ ಯೋಗಾಭ್ಯಾಸ ವ್ರತನಿಯಮದಲಿ |
ರತಿಪತಿಪಿತನುಪಾಸನೆ ಗೈಯ್ಯುತಿರಲು |
ವ್ಯಥೆಗೊಳಗಾದನಾಶ್ರಮ ಕ್ಷಾಮಗೊಳಲು || 1 ||
ಮರಳಿನಾಳವ ಪೊಕ್ಕು ಉರಿವ ದಾನವನ |
ತರಿದು ಧರೆಯನುದ್ಧರಿಸುವಂಥ ಹದನ |
ಹರಿಯಲ್ಲದನ್ಯತ್ರ ಅರಿಯರಾರೆಂದು |
ಪರಮಯೋಗೀಂದ್ರನು ನುತಿಸಿದ ನೊಂದು || 2 || 8 ||

**ಆನಂದಭೈರವಿ - ಆದಿ**
ಸ್ಥಿತಿಪ ಕರುಣವಾರಿಧಿ | ರಕ್ಷಿಸು ದೇವ |
ಪತಿತೋದ್ಧರಣ ಶ್ರೀನಿಧಿ ||
ಗತಿಗಾಣೆನ್ನೈ ಲಕ್ಷ್ಮೀ | ಪತಿ ನೀನು ಮೆಯ್ದೋರಿ |
ವ್ಯಥೆಗೊಳಗಾದೆಮ್ಮ | ಪತಿಕರಿಸೈ ತಂದೆ || 1 || 9 ||

**ಕೇದಾರಗೌಳ - ಅಷ್ಟ**
ಒಲಿದು ಬಂದನು ಕ್ಷೀರನಿಲಯ ಮುನೀಶಗೆ |
ಒಲವಿಂದ ಮೆಯ್ದೋರುತ ||
ಎಲೆಮನೆಯೊಳು ದಿವ್ಯತೇಜೋಮೂರ್ತಿಯ ಕಂಡು |
ತಲೆವಾಗಿ ನಮಿಸಿದನು || 1 ||
ಏಳಯ್ಯ ಮುನಿಯೆ ಮೆಚ್ಚಿದೆ ನಿನ್ನ ಭಕ್ತಿಗೆ |
ಕೇಳು ನೀ ಕರೆದುದೇಕೆ ||
ಭೂಲೋಕದೊಳು ಧರ್ಮಕರ್ಮಕೇನೆರವಾಯ್ತು |
ಶೀಲ ನೀ ಪೇಳೆಂದನು || 2 || 11 ||

**ಆನಂದಭೈರವಿ - ಆದಿ**
ಧುಂಧುದಾನವನಟ್ಟುಳಿ | ಬೇಯುವುದು ವ |
ಸುಂಧರೆ ವನಮಾಲಿ ||
ತಂದೆಲೋಕಕ್ಷೇಮ | ಕ್ಕೆಂದು ಬೇಡುವೆನಿದ |
ಕೊಂದು ಕಳೆಯೊ ಧರ್ಮ |
ಸಿಂಧು ಲೋಕದ ಬಂಧು || 1 || 12 ||

**ಬೇಗಡೆ - ಏಕ**
ಏನಮಾಡಲಿ ಮುನಿಯೆ ನನ್ನಿಂದ | ಸಂಹರಿಸಲಸದಳ |
ದಾನವನು ವರ ಪಡೆದ ವಿಧಿಯಿಂದ ||
ಮಾನವನ ಹೊರತಾರು ದುರುಳಂ |
ಗಾನುವವರಿಲ್ಲದರಿನಿಂ ನೀ |
ಕ್ಷೋಣಿಪಾಲರೊಳಗ್ರಗಣ್ಯನ |
ನೂನ ಬಲನನ್ನರಸಬೇಹುದು || 1 ||
ಹರಿಯೆ ಮಾಯಾವಿಯನು ವಧಿಸುವರು | ಸಾಮರ್ಥ್ಯಶಾಲಿಗ |
ಳಿರುವರೇ ಭೂತಳದಿ ಭುಜಬಲರು ||
ದುರುಳನವ ಹೂಂಕಾರದಿಂ ಸು |
ಟ್ಟುರುಹುವವನು ಕ್ಷಣದೊಳಗೆ ಸಹಿಸುವ |
ನರನನೆಂತರಸುವುದು ಸುರರೇ |
ಪರಿಭವಿತರೆನೆ ಮನುಜರೇಂ ಘನ || 2 || 14 ||

**ಸಾಂಗತ್ಯ - ರೂಪಕ**
ಯಮಿವರ ನಿನಗೀವೆನಮಿತ ಯೌಗಿಕಶಕ್ತಿ |
ಗಮನವು ಸ್ಥೂಲಸೂಕ್ಷ್ಮಗಳ ||
ಶಮನಿಸುತಸುರನ ತಮದ ಮಾಯೆಯನೆಲ್ಲ |
ದಮನಿಸಿ ಗೆಲ್ಲಲುಬಹುದು || 1 ||
ನಿನ್ನೊಳು ನಿಕ್ಷಿಪ್ತವಾದೀ ಮಹಾಶಕ್ತಿ |
ಯನ್ನು ಸತ್ಪಾತ್ರನಿಗೀಯೊ ||
ಎನ್ನಂಶದಿಂದಲುಜ್ವಲಿಪನು ಬಳಿಕಾತ |
ನನ್ನು ನಾ ಬಂದು ಕಾಯುವೆನು || 2 || 16 ||

**ವಾರ್ಧಕ**
ನಾರಾಯಣಂ ದಿವ್ಯಯೋಗಶಕ್ತಿಯನಿತ್ತು |
ಸಾರಲಾಲೋಚಿಸಿದ ಹರಿಶಕ್ತಿಯಂ ಧರಿಸಿ |
ಕ್ರೂರದಾನವನ ಮರ್ದಿಸಿ ಲೋಕಹಿತಗೈವ ವೀರರಾರಿಹರೆನ್ನುತ ||
ಸೂರಿಯನ ವಂಶಸ್ಥರಾದ ಚಕ್ರೇಶ್ವರರ |
ಪಾರ ಸಾಹಿಸಿಗಳೈ ಸದ್ಧರ್ಮಸಂಪದರು |
ಕಾರಿಯವ ಸಾಧಿಸುವೆನೆಂದು ಬಂದನಯೋಧ್ಯ ಚಾರುತರ ಭೂವಲಯಕೆ || 1 || 17 ||

*ಬೃಹದಶ್ವನ ಓಲಗ :*

**ಕಾಂಬೋಧಿ - ಝಂಪೆ**

ತಪನಕುಲಸಂಭವನು | ಶ್ರಾವಸ್ತಕಾಖ್ಯಸುತ |
ನೃಪತಿಬೃಹದಶ್ವನಾಳುತಲಯೋಧ್ಯೆಯನು ||
ಸಫಲ ರಾಜ್ಯಾಂಗ ಸಂತತಿ ಧರ್ಮಕರ್ಮದಿಂ |
ದಪರಿಮಿತ ವೈಭವದೊಳಿರಲು ಯೋಚಿಸುತ || 1 ||
ತರಳನಾಗಿಹ ಕುವಲಯಾಶ್ವನಿಗೆ ಪಟ್ಟವಮಂ |
ಗುರುಮಂತ್ರಿ ಪ್ರಮುಖರನುಮತದಿಂದ ಕಟ್ಟಿ ||
ತೆರಳಲನುವಾಗಿರ್ದ ವಾನಪ್ರಸ್ಥಕ್ಕೆಂದು |
ಹರಿತಂದನಲ್ಲಿಗುತ್ತಂಕಮುನಿವರನು || 2 || 19 ||

**ಭಾಮಿನಿ**

ಮುನಿಯ ಕಂಡಿದಿರೆದ್ದು ವಿನಯದಿ |
ವನಧಿವಸನೇಶ್ವರನು ನಮಿಸುತ |
ತನಯ ಸಹ, ಮಧುಪರ್ಕ ಕೊಡಿಸುತ ಗುರುವಿನಿಂ ಬಳಿಕ ||
ಘನಮಹಿಮರಾರೆಂದು ತಿಳಿಯೆನು |
ಮನದಭೀಷ್ಟವದೆಂತೊ ತವಪದ |
ವನಜದಪ್ಪಣೆ ಶಿರದಿ ಧರಿಸುವೆನೆನುತ ಮಗುಳೆರಗೆ || 1 || 20 ||

**ಆರಭಿ - ರೂಪಕ**

ಕೇಳ್ವುದಯ್ಯ ಮುನಿಯು ನಾನುತ್ತಂಕನೆಂಬನು | ಭೂ |
ಪಾಲ ಲೋಕ ಕ್ಷೋಭೆಗೊಂಡುದರಿತು ಬಂದೆನು ||
ಶೀಲ ನಿನ್ನ ರಾಜ್ಯ ತೋಷದೊಳಗೆ ಮುಳುಗಿದೆ | ನಾ |
ಕೇಳಬಹುದೆ ನಿನ್ನ ರೀತಿ ಚಿತ್ರವೆನಿಸಿದೆ || 1 ||
ಮುನಿಯೆ ವಾನಪ್ರಸ್ಥಕಾಗಿ ಪೊರಟು ನಿಂತಿಹೆ | ಎನ್ನ |
ತನಯನಿಂಗೆ ಪಟ್ಟವಿತ್ತೆ ತಪಕೆ ತೆರಳುವೆ ||
ವನದ ವ್ರತಕೆ ಹರಸಬೇಕು ಧನ್ಯನಾಗಲು | ಶಾಂತ |
ಮನದಿ ದೈವಚಿಂತೆಗೈದು ಮೋಕ್ಷ ಪೊಂದಲು || 2 ||
ಮಕುಟ ಧರಿಸಿ ಮೆರೆವ ಶಿರಕೆ ಜಟೆಯು ಶೋಭೆಯೆ | ಸತ್ವ |
ಪ್ರಕಟಗೊಳುವ ಕೈದುಗೈಗೆ ಜಪದ ಮಾಲೆಯೆ ||
ಸುಖದೊಳಿಲ್ಲ ಭುವಿಯ ರೀತಿ ಹೊಣೆಯ ತಪ್ಪುತ | ಪೋಪು |
ದಕಟ ಧರ್ಮವೇನೊ ಭೂಪ ನಿನಗೆ ಮುನಿವ್ರತ || 3 || 23 ||

**ಕೇದಾರಗೌಳ - ಅಷ್ಟ**

ಭುಜಬಲದಿಂದಾಳಿ | ಸುಜನರ ಪೊರೆದೆನು |
ಕುಜನರ ಶಿಕ್ಷಿಸುತ ||
ಋಜುಮಾರ್ಗ ತಪ್ಪೆ ಭೂ | ವ್ರಜದೊಳಿಲ್ಲದೆ ಕ್ಷೋಭೆ |
ದ್ವಿಜವರ್ಯ ಪೇಳುವುದು || 1 || 24 ||

**ಕೇದಾರಗೌಳ - ಝಂಪೆ**

ಧುಂಧುದಾನವನೆಂಬನ | ತಪದುರಿಗೆ |
ಬೆಂದು ಪೋದೀತು ಭುವನ ||
ಬಂದು ನೀ ಸಲಹಬೇಕು | ಭೂಪಾಲ |
ರಿಂದಲ್ಲದಾರು ದಿಕ್ಕು || 1 || 25 ||

**ಕೇದಾರಗೌಳ - ಅಷ್ಟ**

ದೊರೆತನವನು ಬಿಟ್ಟು ಧರೆಗಿಳಿಸಿದೆ ಶಸ್ತ್ರ |
ಜರೆಯು ಬಂದಡಸಿಹುದು ||
ತರಳ ಋತಧ್ವಜ ಧುರಧೀರನಹ ನಿಮ್ಮ |
ಪರಿಚರ್ಯೆಗೊಪ್ಪಿಸುವೆ || 1 || 26 ||

**ಕೇದಾರಗೌಳ - ಝಂಪೆ |**

ರಾಯ ಕೇಳಾ ದುರುಳನು | ಅತಿ ಬಲನು |
ಆಯತನೆ ತವತರಳನು ||
ಮಾಯಾವಿಯನ್ನು ಗೆಲಲು | ಬೇಕು ಬಹು |
ಪಾಯ ಶಸ್ತ್ರಾಸ್ತ್ರಬಲವು || 1 || 27 ||

**ಸಾಂಗತ್ಯ - ರೂಪಕ**
ಗಾಲವಾನುಗ್ರಹ ದತ್ತಾಶ್ವವೇರುತ್ತ |
ತಾಳ ಪಾತಾಳ ಕೇತುಗಳ ||
ಸೀಳುತ್ತಲೊಲಿಸಿದ ಗಂಧರ್ವಕನ್ಯೆ ಮ |
ದಾಲಸೆಯನುರೂಪಿನವಳ || 1 || 28 ||

**ಆರ್ಯಸವಾಯಿ - ಏಕ**
ತಳುವದೆ ಕಳುಹೈಯಳವಿಯ ಗೆಲುವಡೆ |
ಜಲಜಾಂಬಕನಿಂದೊಲುಮೆಯನು ||
ಗಳಿಸುತ ಕುಲ, ಭೂತಲದೇಳಿಗೆಯಂ |
ಉಳಿಸುವ ತೆರದೊಳು ಬೆಳೆಯುವನು || 1 || 29 ||

*ಕುವಲಯಾಶ್ವ :*
**ಭಾಮಿನಿ**
ಸುತನ ಕರೆಯುತ ಪರಸುತೆಂದನು |
ಪೃಥುವಿಪಾಲರ ಪಂಕ್ತಿಯಲಿ ನೀ |
ನತುಳಸಾಧಕನೆನಿಸು ಮುನಿಯಾಜ್ಞೆಯಲಿ ದೈತ್ಯನನು ||
ಹತಿಸು ಹರಿಯನ್ನೊಲಿಸು ರವಿ ಸಂ |
ತತಿಯ ಬೆಳಗೆಂದೊಪ್ಪಿಸುತ ಭೂ |
ಪತಿ ಪೊರಟ ಸತಿಸಹಿತ ವಾನಪ್ರಸ್ಥವ್ರತಿಯಾಗಿ || 1 || 30 ||

**ಸುರುಟಿ - ಏಕ**
ಮುನಿಗೆ ಮಣಿದು ಜನಪ | ತವಪದ |
ವನಜದಾಜ್ಞೆ ಧರಿಪ ||
ಘನಶಕ್ತಿಯನಿತ್ತಡೆಯನುಗಾಲವು |
ತನುಮನ ವಾಕಿನೊಳನುವರ್ತಿಸುವೆನು || 1 || 31 ||

**ಕಾಪಿ - ಅಷ್ಟ**
ಇಕ್ಷ್ವಾಕು ವಂಶದ ಭಾನು | ಈವೆ |
ಪಕ್ಷಿವಾಹನನಿತ್ತ ಯೋಗಶಕ್ತಿಯನು ||
ನಿಕ್ಷಿಪ್ತಗೊಳೆ ನಿನ್ನೊಳಿನ್ನು | ಸರ್ವಾ |
ಪೇಕ್ಷೆಯನೀಯುವ ಭಜಿಪುದಾತನನು || 1 ||
ಸರಯೂನದೀತೀರದಲ್ಲಿ | ನಿಂದು |
ಹರಿಯನು ನೆನೆವುದು ಏಕೋಭಾವದಲಿ ||
ಗುರಿಯ ತೋರುವನು ಶ್ರೀರಮಣ | ಮತ್ತೆ |
ಬರವ ಹಾರೈಪೆನಾಶ್ರಮದಿ ಭೂರಮಣ || 2 || 33 ||

**ಕಂದ**
ಇತ್ತಂ ಯೌಗಿಕ ಶಕ್ತಿಯ |
ಪೃಥ್ವೀಶಂ ದಿವ್ಯ ತೇಜದಿಂದುಜ್ವಲಿಸಲ್ ||
ಉತ್ತಂಕಂಗೆರಗುತ್ತಂ |
ಚಿತ್ತದಿ ನೆಲೆಗೊಳಿಸಿ ಯೋಗಿವಂದ್ಯನ ನೆನೆದಂ || 1 || 34 ||

**ವಾರ್ಧಕ (ಅರ್ಧ)**
ಮೌನಿವರಗೆರಗಿ ತ್ರೈಕರಣ ಶುದ್ಧಿಯೊಳರಸ |
ಧ್ಯಾನಿಸಿದನಷ್ಟಾಕ್ಷರೀ ದಿವ್ಯಮಂತ್ರದಿಂ |
ಓಂ ನಮೋ ನಾರಾಯಣಾಯೆಂದು ವೈಕುಂಠವಾಸನಂ ಭಕ್ತಿಯಿಂದ || 1 || 35 ||

**ನವರೋಜು - ಏಕ**
ಕ್ಷೀರಾಂಬೋನಿಧಿಶಯನ | ಸಂ |
ಸಾರಾಂಬೋನಿಧಿತರಣ ||
ನಾರಾಯಣ ಜಯವೆನ್ನುತ ನುತಿಸುವ |
ಭೂರಮಣಗೆ ಮೆಯ್ದೋರಿದ ಶ್ರೀಹರಿ || 1 ||
ಮೆಚ್ಚಿದನೈ ಭೂಪತಿಯೆ | ಮನ |
ದಿಚ್ಛೆಯ ಬೇಡೈ ದೊರೆಯೆ ||
ಸಚ್ಚರಿತನೆ ನೀ ಕೆಚ್ಚೆದೆಯಿಂದಲಿ |
ದುಶ್ಚರಿತರ ನಿರ್ಮೂಲನಗೈದವ || 2 || 37 ||

**ನವರೋಜು - ಆದಿ**
ನೋಡಿದನಾಕ್ಷಣ ವಿಭುವ | ತಾ |
ಹೂಡುತ ರೂಢಿಯೊಳ್ತನುವ ||
ಪಾಡುತಲಾಡುತ ನೋಡಿ | ಕೊಂ |
ಡಾಡಿದ ಬೇಡಿದ ಪ್ರೌಢಿ || 1 || 38 ||

**ಶಂಕರಾಭರಣ - ತ್ರಿವುಡೆ**
ಮೃದುಕರದಿ ಮೇಲೆತ್ತಿ ಮಹಿಪನ |
ಮದನಪಿತ ಮಾಯಾವಿ ದೈತ್ಯನ |
ಸದೆವ ಸಾಹಸಿಗಾಗಿ ಶೋಧಿಸ |
ಲೊದಗಿ ಬಂದೈ ಮುನಿಪನ || ಕರುಣದಿಂದ || 1 ||
ತಂದೆಗಳ ಕೊಂದಿರುವ ತ್ವೇಷದಿ |
ಹೊಂದೆ ವರ ನಾ ಸಹಿತ ಸುಮನಸ |
ವೃಂದ ಬೆದರಿತು ಲೋಕನಾಶ |
ಕ್ಕೆಂದು ತಪದೊಳಗಿರ್ಪನು || ಧುಂಧುದೈತ್ಯ || 2 || 40 ||

**ಜಂಜೂಟಿ - ಅಷ್ಟ**
ಧನ್ಯೋಽಸ್ಮಿ ಪನ್ನಗಶಯನ | ದೈತ್ಯ |
ನನ್ನು ಕೊಲ್ಲಲು ನಿನ್ನ ಕರುಣ ||
ಎನ್ನ ಮೇಲಿರಲಾತ ಗಣ್ಯನೆ ಭಗವಂತ |
ಪುಣ್ಯಪುರುಷನೆ ನಿನ್ನ ಸೇವೆಯ |
ದೆನ್ನುವೆನು ಮನ್ನಿಸುತ ರಕ್ಷಿಸು || 1 ||
ಕುವಲಯಾಶ್ವವನೇರಿ ನಡೆದು | ಭೂಗ |
ರ್ಭವ ಸೇರಿದವನನ್ನು ಪಿಡಿದು ||
ಬವರಕ್ಕೆಳೆಯೊ ಭೂಪನಿತ್ತೆನವಧ್ಯತ್ವ |
ತವಿಸದಿಹ ಬ್ರಹ್ಮಾಸ್ತ್ರವಿತ್ತೆನು |
ರವಿಕುಲೋದ್ಭವ ಬೆಳಗು ಸಾಹಸ || 2 || 42 ||

**ಸುರುಟಿ - ಏಕ**
ಹರಿಯು ಹರಸಿ ತೆರಳೆ | ಚಿತ್ತವು |
ಪರಿತೋಷದೊಳರಳೆ ||
ಧರೆಯ ನಿಯಂತ್ರಣ | ಕಿರೆ ಮೇಲಿನ ಕರೆ |
ಕಿರುತೊರೆಯಪ್ಪುದು | ಶರಧಿಗೆ ಸರಿ ಸಮ || 1 || 43 ||

**ಮಾರವಿ - ಝಂಪೆ**
ಓಲಗವನಿತ್ತು ಭೂ | ಪಾಲ ಸಚಿವನೊಳೆಂದ |
ಶ್ರೀಲಲಾಮನ ನುಡಿಯ | ಪಾಲಿಸುವ ನಡೆಗೆ ||
ಮೇಳಗೊಳ್ಳಲಿ ನಮ್ಮ | ವೀರ ಕಟ್ಟಾಳುಗಳು |
ಖೂಳನಿಹ ಠಾವಿಗಿ | ನ್ನಾಲಸವಗೊಳದೆ || 1 ||
ಸುತ ದೃಢಾಶ್ವನು ಮಣಿದು | ಪಿತನೆ ನಾವೈತಹೆವು |
ಕ್ಷಿತಿಯನುತ್ಖನನ ಗೆ | ಯ್ಯುತ ಖಳನ ಕೆಣಕಿ ||
ಧೃತಿಗೆಡಿಪೆವಾತನನು | ಸತತ ಪೀಡಿಸಿ ದಣಿಸಿ |
ಕೃತಕೃತ್ಯರಾಗುವೆವು | ಕೊಡುವುದಪ್ಪಣೆಯ || 2 || 45 ||

**ಸೌರಾಷ್ಟ್ರ - ತ್ರಿವುಡೆ**
ದಂಡ ನೀ ಮುನ್ನಡೆಸೆನುತ ಭೂ |
ಮಂಡಲೇಶ್ವರ ಪೇಳಲೆದ್ದು ಪ್ರ |
ಚಂಡ ಯುವಕರ ಪಡೆಯು ಪೊರಟುದ | ಜಾಂಡ ಬಿರಿಯೆ || 1 || 46 ||

**ತುಜಾವಂತು - ರೂಪಕ**
ಪೊರಟುದಮಮ ವೀರಸೇನೆಯು | ಕುವಲಯಾಶ್ವ |
ಸ್ಮರಿಸೆ ಬರಲಿಕೇರಿ ನೃಪತಿಯು ||
ಗುರುವಿನಾಶ್ರಮವನು ನೆನೆದು |
ಹರಿಯ ಸ್ಮರಿಸಿ ಪರಿಘ ಕುಂತ |
ಶರ ಶರಾಸನಾದಿಗಳನು |
ಧರಿಸಿ ಗದೆಯ ತಿರುಹಿ ಖಡ್ಗವ || ವೀರ ನಡೆಯ ||
ಗುರಿಯ ಪೊಕ್ಕರುಜ್ಜ್ವಲೀಕವ | ಮುನಿಪಗೆರಗೆ |
ಪರಸುತೆಂದ ಗೈವ ಕಜ್ಜವ || 1 || 47 ||

**ಭಾಮಿನಿ**
ಬಂದೆಯಾ ಭೂಪಾಲ ಸುತ ಬಲ |
ವೃಂದಗೂಡುತ ನೋಡು ತಪದಲಿ |
ನಿಂದ ದುರುಳನ ಹೂಂಕೃತಿಗೆ ಹೊಗೆಯಾಡುತಿದೆ ಜಗವು ||
ಬೆಂದುರಿವ ಸೈಕತವನಗೆಯುತ |
ಕೊಂದು ಕಳೆ ಕಂಟಕನ, ನಗಿಸು ವ |
ಸುಂಧರೆಯನೆನಲೆದ್ದನಾಗ ದೃಢಾಶ್ವ ಸೇನೆಸಹ || 1 || 48 ||

**ದೇಶೀ - ಅಷ್ಟ**
ಅಗೆದರು | ಭೂಮಿ | ಯಗೆದರು |
ಬಗೆ ಬಗೆ ಸಲಿಕೆ ಗುದ್ದಲಿ ಹಾರೆಗಳನು |
ತೆಗೆದೆತ್ತುತೆತ್ತಿ ಮರಳ ರಾಶಿಯನ್ನು || ಅಗೆದರು | ಪ ||
ಧಗಧಗಿಸುವ ಹೂಂಕಾರದ ದಾರಿಪಿಡಿದು |
ಉಗುವ ಬೆವರ ನೀರಿನಂದದಿ ಸುರಿದು ||
ವಿಗಡಭಟರು ರಾಜಸುತರು ಮುಂಬರಿದು |
ಬಗೆದು ಕಂಡರು ಪಾತಾಳದ ಗವಿಗಿಳಿದು || ಅಗೆದರು || 1 || 49 ||

**ಸೌರಾಷ್ಟ್ರ - ತ್ರಿವುಡೆ**
ದೀರ್ಘದೇಹದಿ ಬೆಳೆದು ತಪದಿಂ |
ಭೋರ್ಗರೆವ ದಾನವನ ನೋಡ |
ಲ್ಕಾರ್ಗಣೆಯು ಸೆಳೆದೆಂದ ನೃಪಸುತ | ಕೂರ್ಗಣೆಯನು || 1 || 50 ||

**ಷಟ್ಪಾದ ಮಾರವಿ - ಏಕ**
ದಡಿಗನೆ ಏಳೇಳ್ |
ಪೊಡವಿಯೊಳಡಗುತ |
ಕಡುತಪದಿಂದಿಳೆಯ ||
ಸುಡುವ ಗುರಿಯ ಹೊ |
ತ್ತಡೆ ನಡೆ ತೋರುವೆ |
ಕಡೆಗಾಂ ಶೈಮಿನಿಯ || 1 ||
ಹೊತ್ತಿಸಿರುರಿಯನು |
ಕೆತ್ತಿಸಿರಾಯುಧ |
ಕಿತ್ತೆಳೆಯುವುದೆಂದು ||
ಮೃತ್ಯುಮುಖಿನ ನು |
ಗ್ಗೊತ್ತುತಲೆರಿದರು |
ಸತ್ತ್ವದಿ ಮುಂಬಂದು || 2 || 52 ||

**ಅಷ್ಟಪಾದ ಮಾರವಿ - ಏಕ**
ಎದ್ದ ರಭಸದೊಳ | ಗದ್ದರಿಸಿತು ಧರೆ |
ಹೊದ್ದಿದರಾರೆಂ | ದುದ್ಧತ ರೋಷದಿ ||
ಕ್ಷುದ್ರ ಮನುಜರನು | ಮೆದ್ದು ಬಿಡುವೆನೆಂ |
ದದ್ಭುತರೂಪನು | ಒದ್ದನು ಧರೆಯನು || ಏನನೆಂಬೆ || 1 ||
ಘೋರದನುಜ ಹೂಂ | ಕಾರವ ಗೈಯುತ |
ಕಾರುತಲುರಿಯನು | ಏರಿ ಬರಲು ಕಂ |
ಡಾರುಭಟಿಸುತಲಿ | ವೀರಕುಮಾರರು |
ತೂರುತ ಶರಮಂ | ಕ್ರೂರನ ತಡೆದರು || ಏನನೆಂಬೆ || 2 || 54 ||

**ಮಾರವಿ - ಮಟ್ಟೆ**
ಎಲವೊ ದಡಿಗ ದನುಜ ಧರೆಯ |
ಕೊಲುವ ಕ್ಷಾಮಕೆಳೆದ ನಿನ್ನ |
ನಳಿನಮಿತ್ರಕುಲಜರಾವು |
ಛಲದಿ ಗೆಲುವೆವು || 1 ||
ನೊರಜು ನರರೆ ನಾಕ ನರಕ |
ಹರಿ ಹರಾದಿಗಳನು ಮುಕ್ಕಿ |
ಮುರಿವ ಮಾಯಕಾರ ಧುಂಧು |
ವರಿತು ತೆರಳಿರಿ || 2 ||

ಧ್ಯೇಯ ಕೆಟ್ಟುದಿರಲು ನಿನ್ನ |
ಮಾಯವೆಂದು ಬರದು ಬಲಕೆ |
ಆಯತಿಕೆಯೆ ಕಾಯಕೊಬ್ಬು |
ಬಾಯ ಬೊಬ್ಬೆಯು || 3 ||
ಹುಚ್ಚು ಸಾಹಸಿಗಳೆ ನಿಮ್ಮ |
ಕೆಚ್ಚು ನಿಲಿಪೆನೆಂದು ದನುಜ |
ಕಿಚ್ಚುನುಗುಳುತೈದಿ ಬರಲು |
ಬೆಚ್ಚಿ ಸೇನೆಯು || 4 || 58 ||

**ವಾರ್ಧಕ**
ದಾನವಂ ರೋಷದಿಂ ದಳ್ಳುರಿಯ ಸುರಿಸುತ್ತ
ಸೇನೆಯಂ ಸುಡುತ ಮುಂದೈತರಲ್ ತನಯರಂ |
ಭೂನಾಥ ನಿಲಿಸುತಶ್ವವನೇರಿ ಮುಂಬರಿದು ಮಾಯಾವಿಯಂ ತಡೆಯುತ ||
ಧ್ಯಾನಿಸುತ ಶ್ರೀಹರಿಯ ವಾರುಣಾಸ್ತ್ರವನು ದಾ |
ವಾನಲೋಪಮ ದಗೆಯ ಮೇಲೆಸೆಯೆ ಜಲಮಯಂ |
ತಾನಾಗಿ ನೀರೊಳಗೆ ಮುಳುಗೆದ್ದು ಕೋಪದಿಂ ಕ್ಷೋಣೀಶನೊಡನೆಂದನು || 1 || 59 ||

**ಕಲ್ಯಾಣಿ - ಅಷ್ಟ**
ಆರೆಲೊ ಮನುಜ | ತಪಕಡ್ಡ ಬಂದವ |
ನಾರೆಲೊ ಮನುಜ ||
ಘೋರತಪದಿಂ ವಿಧಿಯ ಮೆಚ್ಚಿಸಿ |
ಮೂರುಲೋಕವ ಗಣಿಸದಗಣಿತ |
ಶೂರ ಮಧುಕೈಠಭಜ ಮಾಯಾ |
ವೀರ ಧುಂಧುವ ತುಡುಕ ಬಂದವ |
ನಾರೆಲೊ ಮನುಜ || 1 || 60 ||

**ಮೆಚ್ಚುಗೌಳ - ಅಷ್ಟ**
ಕುವಲಯಾಶ್ವನು ರವಿ ಕುಲಜನಯೋಧ್ಯೇಶ |
ನವಿತು ತಪವಗೈಯುತ ||
ಅವನಿಯ ಕ್ಷಾಮಗೈದವನೆ ಶಿಕ್ಷಿಸೆ ಬಂದೆ |
ದಿವಿಜವಿರೋಧಿ ಕೇಳು || ಕಾಳಗಕೇಳು || 1 ||
ಶಿಕ್ಷೆಯ ಕೊಡಬಂದ ವೀರ ಕೇಳೆನ್ನೊಂದು |
ಅಕ್ಷಿಯೊಳ್ ಸುಡುವೆ ನಿನ್ನ ||
ಮಕ್ಷಿಕ ವಿಷದ ಭಾಂಡವ ಪೊಕ್ಕ ತೆರನಾಯ್ತು |
ರಕ್ಷಿಪರಾರೊ ನಿನ್ನ || ಮಾನವನನ್ನ || 2 || 62 ||

**ಸೌರಾಷ್ಟ್ರ - ತ್ರಿವುಡೆ**
ಲೋಕಕಂಟಕ ಜಗದ ಸುಜನಾ |
ನೀಕವಿಳಿಸಿದ ಕಣ್ಣ ನೀರೇ |
ಸಾಕು ನಿನಗೆಂದೆಚ್ಚನಾತಗ | ನೇಕ ಶರವ || 1 ||
ಬಿಚ್ಚಿದನು ಮಾಯವನು ದಾನವ |
ಮುಚ್ಚಿದನು ಗೈದಂಧಕಾರವ |
ಕಿಚ್ಚಿನಿಂದಾವರಿಸಿ ಗುಡುಗಿದ | ಚಚ್ಚರದಲಿ || 2 ||
ಹರಿಯ ಯೋಗಾವರಣದಿಂ ಭೂ |
ವರನ ದೇಹದೊಳುದ್ಭವಿಸೆ ಜಲ |
ಸುರಿದುದೈ ಸಂವರ್ತಮೇಘದ | ತೆರದಿ ಮಳೆಯು || 3 ||
ಆರುವಗ್ನಿಯ ಮಾಯೆಯನು ಕಂ |
ಡಾರುಭಟಿಸುತ ಬರಲು ಮುನಿಪನು |
ವೀರ ತೊಡು ತೊಡು ಬ್ರಹ್ಮಶರ ಕೊಲು | ಕ್ರೂರನನ್ನು || 4 ||
ಹರಿಯ ನೆನೆಯುತ ಮುನಿಪಗೊಂದಿಸಿ |
ವರಮಹಾಸ್ತ್ರವನೆಸೆಯೆ ದಾನವ |
ನುರುಳಿದನು ಶಿರ ಕಂಪಿಸುತ್ತಲಿ | ಧರೆಯು ಬಿರಿಯೆ || 5 || 67 ||

